ದಿನಾಂಕಃ **30-01-2023**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ.ಡಿ. ವಕೀಲರಿಂದಃ**

ನಾನು 12 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮತ್ತು ಎದುರುದಾರರ ಮದುವೆ 17/05/1993 ರಲ್ಲಿ ಆಗಿರುತ್ತದೆ. ಮದುವೆಯ ಸಮಯದಲ್ಲಿ ನಾವು ಹಣವನ್ನು ಖರ್ಚು

ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನಿಜ. ಮದುವೆಯಾದ ನಂತರ ನಾನು ಮತ್ತು ಎದುರುದಾರರ 6 ವರ್ಷಗಳ ಕಾಲ ಚನ್ನಾಗಿಯೇ ಇದ್ದೆವು. ಆ ಅವಧಿಯಲ್ಲಿ ಎದುರುದಾರರು ನನ್ನನ್ನು ಚನ್ನಾಗಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ಎದುರುದಾರರು ನನ್ನನ್ನು ಚನ್ನಾಗಿ ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿಯೇ ನಾನು ಅವರನ್ನು ತೊರೆದು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಇಬ್ಬರು ಮಕ್ಕಳಿರುತ್ತಾರೆ. ಮೊದಲನೇ ಮಗಳು ಪವನಶ್ರೀ 1994 ರಲ್ಲಿ ಜನಿಸಿರುತ್ತಾಳೆ. 2 ನೇ ಮಗ ಮನೋಜ್ ಈತನು 1996 ರಲ್ಲಿ ಜನಿಸಿರುತ್ತಾನೆ.

ನನ್ನ ಮತ್ತು ಎದುರುದಾರರ ಮಧ್ಯ 1999 ರಲ್ಲಿ ವಿವಾದ ಸೃಷ್ಟಿಯಾಗಿರುತ್ತದೆ. ಆ ಸಮಯದಲ್ಲಿ ಮಗಳಿಗೆ ನಾಲ್ಕೂವರೆ ವರ್ಷ ಮತ್ತು ಮಗನಿಗೆ ಎರಡೂವರೆ ವರ್ಷ ವಯಸ್ಸಾಗಿದ್ದವು. ಮದುವೆಯಾದ ನಂತರ ನಾನು ಮತ್ತು ನನ್ನ ಗಂಡ ಇಬ್ಬರೂ ಕೂಡ ತಲಕಾಡಿನಲ್ಲಿ ವಾಸವಾಗಿದ್ದೆವು ಎಂದರೆ ನಿಜ. ಮದುವೆಯಾದ ನಂತರ ಎದುರುದಾರರಿಗೆ ತಲಕಾಡಿನಿಂದ ಬೇರೆ ಕಡೆಗೆ ವರ್ಗಾವಣೆಯಾಯಿತು ಎಂದರೆ ನಿಜ. ವರ್ಗಾವಣೆಯಾದ ಕಾರಣ ಎದುರುದಾರರು ತಿ.ನರಸೀಪುರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸಿಸಲು ಪ್ರಾರಂಭಿಸಿದರು ಎಂದರೆ ನಿಜ. ನಾನು ಎದುರುದಾರರ ಜೊತೆಗೆ ತಿ.ನರಸೀಪುರಕ್ಕೆ ಬಂದು ವಾಸಿಸಲು ತಿರಸ್ಕರಿಸಿದೆನು ಎಂದರೆ ಸರಿಯಲ್ಲ, ಆದರೆ ಅವರೇ ನನ್ನನ್ನು ಕರೆಯಲಿಲ್ಲ. ಎದುರುದಾರರೇ ನನ್ನನ್ನು ಒಟ್ಟಿಗೆ ವಾಸವಾಗಿರಲು ಕರೆದರೂ ಕೂಡ ನಾನೇ ನನ್ನ ಮಗನನ್ನು ಕರೆದುಕೊಂಡು ಸೋಸಲೆ ಗ್ರಾಮಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಹೆಣ್ಣು ಮಗಳ ಪಾಲನೆ–ಪೋಷಣೆ ಜವಾಬ್ದಾರಿ ಎದುರುದಾರರಿಗೆ ಸೇರಿತು ಎಂದರೆ ಸಾಕ್ಷಿದಾರರು ಅವಳನ್ನು ಶಾಲೆಗೆ ಸೇರಿಸಿದ್ದರಿಂದ ಶಾಲಾ ದಿನಗಳಲ್ಲಿ ಎದುರುದಾರರ ಜೊತೆ ಮತ್ತು ರಜೆ ದಿನಗಳಲ್ಲಿ ತನ್ನ ಜೊತೆ ವಾಸಿಸುತ್ತಿದ್ದಳು ಎನ್ನುತ್ತಾರೆ. ನನ್ನ ಮಗಳಿಗೆ ಎದುರುದಾರರೇ ವಿದ್ಯಾಭ್ಯಾಸ ಮಾಡಿಸುತ್ತಿದ್ದರು ಎಂದರೆ ನಿಜ. ಆ ಸಮಯದಲ್ಲಿ ನನ್ನ ಮಗಳನ್ನು ಬೆಳಗ್ಗಿನ ಸಮಯದಲ್ಲಿ ಸಿದ್ಧಪಡಿಸಿ ಶಾಲೆಗೆ ಕಳುಹಿಸಿ ನಂತರದಲ್ಲಿ ತಮ್ಮ ಕರ್ತವ್ಯಕ್ಕೆ ಹೋಗುವ ಜವಾಬ್ದಾರಿ ಎದುರುದಾರರಿಗಿತ್ತು ಎಂದರೆ ನಿಜ. ಮಗಳನ್ನು ವಿದ್ಯಾಭ್ಯಾಸ

ಮಾಡಿಸುವುದು ಹಾಗೂ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳುವುದು ತೊಂದರೆಯಾಗುತ್ತಿದೆ ಎಂದು ಹೇಳಿ ಎದುರುದಾರರು ನನ್ನನ್ನು ಅವರ ಜೊತೆ ಬಂದು ವಾಸ ಮಾಡಲು ಕರೆದರು ಎಂದರೆ ಸರಿಯಲ್ಲ. ಎದುರುದಾರರು ವಿನಂತಿಸಿದರೂ ಕೂಡ ನಾನೇ ಅವರ ಮಾತಿಗೆ ಬೆಲೆ ಕೊಡದೇ ಅವರ ಜೊತೆಗೆ ಬಂದು ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.